## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.2007/2018** **ಪಿ. ಡಬ್ಲ್ಯುಃ 1**

| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಅಭಿಷೇಕ್<br>ನಂಜನಗೂಡು |
|---|---|
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 21.04.2026** |

**ಮುಂದುವರೆದ  ಪಾಟೀ ಸವಾಲುಃ ಶ್ರೀ ಎ.ಎಸ್. ವಕೀಲರಿಂದಃ**

ಸಾಕ್ಷಿಗೆ ನಿ.ಪಿ. 1 ಅನ್ನು ತೋರಿಸಿ ಅದರಲ್ಲಿ ರೂಪಾಯಿಗಳು ಎಂದು ಬರೆದಿರುವ ಸ್ಥಳದಲ್ಲಿ ಯಾವುದಾದರೂ ವ್ಯತ್ಯಾಸ ಕಾಣುತ್ತಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ವ್ಯತ್ಯಾಸ ಕಾಣುತ್ತದೆ ಎಂದು ನುಡಿಯುತ್ತಾರೆ. ನಿ.ಪಿ. 1 ರಲ್ಲಿ ಬರೆದಿರುವ ಹಣ ನಮೂದು ಮಾಡಿರುವ ಬರವಣಿಗೆಯ ಶಾಯಿಯಲ್ಲಿ ವ್ಯತ್ಯಾಸ ಕಾಣುತ್ತದೆ ಎಂದು ನುಡಿಯುತ್ತಾರೆ. ನಾನು ವ್ಯತ್ಯಾಸ ಕಾಣುತ್ತಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಚೆಕ್ಕು ದುರುಪಯೋಗ ಆಗಿದೆ ಎಂದು ನೋಟಿಸ್ ಬಂದ ನಂತರ ತಿಳಿದು ಬಂತು. ಆದರೆ ಆ ನೋಟಿಸ್ ಯಾವ ದಿನಾಂಕದಂದು ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನೊಟಿಸ್ ಬಂದನಂತರ ಕೂಡ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುವುದಿಲ್ಲ. ನಾನು ನೋಟಿಸ್ ಬಂದ ನಂತರ ನೋಟಿಸ್ ಗೆ ಪ್ರತ್ಯುತ್ತರವನ್ನು ನೀಡಿರುವುದಿಲ್ಲ. ಒಂದು ವೇಳೆ ಚೆಕ್ಕು ಬರವಣಿಗೆಯಲ್ಲಿ ತಿದ್ದುಪಡಿಯಾದಲ್ಲಿ ನೀವು ಪ್ರತ್ಯುತ್ತರ ನೋಟಿಸಿನಲ್ಲಿ ಬರವಣಿಗೆಯಲ್ಲಿ ತಿದ್ದುಪಡಿಯಾಗಿರುತ್ತದೆ ಎಂದು ತಿಳಿಸಿರುವೀರಾ ಎಂದರೆ ಸಾಕ್ಷಿಯು ನಾವು ಪ್ರತ್ಯುತ್ತರ ನೋಟಿಸನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಬರವಣಿಗೆಯಲ್ಲಿ ತಿದ್ದುಪಡಿಯಾಗಿರುತ್ತದೆ ಎಂದು ಬ್ಯಾಂಕಿನಲ್ಲಿಯೂ ಸಹ ಯಾವುದೇ ಪತ್ರವನ್ನು ನೀಡಿರುವುದಿಲ್ಲ. ಒಂದು ವೇಳೆ ಚೆಕ್ಕು ಬರವಣಿಗೆಯಲ್ಲಿ ತಿದ್ದುಪಡಿಯಾಗಿದ್ದರೆ ನೀವು ಬ್ಯಾಂಕಿನವರಿಗೆ ಚೆಕ್ಕನ್ನು ಹಾಜರುಪಡಿಸಿದಾಗ ಪಿರ್ಯಾದಿದಾರರಿಗೆ ದುಡ್ಡನ್ನು ನೀಡಬೇಡಿ ಎಂದು ತಿಳಿಸಬಹುದಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ನಾನು ಬ್ಯಾಂಕಿನವರಿಗೆ ಇದರ ಬಗ್ಗೆ ಹೇಳಿರುವುದಿಲ್ಲ. ಸಾಕ್ಷಿ ಮುಂದುವರೆದು ಕೋರೋನ ಸಮಯದಲ್ಲಿ ನನಗೆ ಅಪಘಾತವಾದ ಕಾರಣ ನಾನು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು

ಕೋರೋನ ಸಮಯದಲ್ಲಿ ಅಪಘಾತ ಆದ ವಿಷಯವನ್ನು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ. ದಿಃ 01.03.2021 ರಲ್ಲಿ ಪಿರ್ಯಾದಿ ಮತ್ತು ನಾನು ಸೇರಿ ಒಂದು ಜಂಟಿ ರಾಜೀ ಅರ್ಜಿಯನ್ನು ರೂ. 40,000/- ಕೊಡಲು ಬದ್ಧನಾಗಿರುತ್ತೇನೆ ಎಂದು ಹಾಕಿರುತ್ತೇನೆ ಎಂದರೆ ಸರಿ ಮತ್ತು ನಾನು ರೂ. 10 ಸಾವಿರ ರೂಪಾಯಿಗಳು ಅಷ್ಟೇ ಕೊಡಬೇಕು ಎಂದು ಹೇಳಿದ್ದೆ. ನಾನು ಪಿರ್ಯಾದಿದಾರರಿಂದ ರೂ. 70 ಸಾವಿರಗಳನ್ನು ಪಡೆದುಕೊಂಡಿರುತ್ತೇನೆ ಮತ್ತು ರೂ. 10 ಸಾವಿರ ರೂಪಾಯಿಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 1 ರಲ್ಲಿರುವ ಮೊತ್ತವನ್ನು ಅಂಕಿಯಲ್ಲಿ ನಮೂದು ಮಾಡಿರುತ್ತೇನೆ, ಅಕ್ಷರಗಳಲ್ಲಿನಮೂದು ಮಾಡಿರುವುದಿಲ್ಲ. ನಾನು ರೂ. 70 ಸಾವಿರ ರೂಪಯಿಗಳನ್ನು ಪಡೆದುಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಂದ ರೂ. 10 ಸಾವಿರ ರೂಪಯಿಗಳನ್ನು ಪಡೆದುಕೊಂಡಿರುತ್ತೇನೆ, ಮತ್ತು ಪಿರ್ಯಾದಿದಾರರು ನಮ್ಮ ಮನೆಗೆ ಬಂದು ನಮ್ಮ ತಂದೆ ತಾಯಿಗಯಿಂದ ರೂ. 8,000/- ಗಳನ್ನು ವಾಪಸ್ಸು ಪಡೆದುಕೊಂಡಿರುತ್ತಾರೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ಮತ್ತು ನಾನು ಹೇಳುತ್ತಿರುವ ವಿಷಯಗಳು ಸುಳ್ಳು ಎಂದರೆ  ಸರಿಯಲ್ಲ. ಪ್ಯಿಯಿಾದಿದಾರರು ತಮ್ಮ ಪಿರ್ಯಾದಿಯಲ್ಲಿ ಕೇಳಿರುವ ಹಣವನ್ನು ನಾನು ಕೊಡಲು ಬದ್ಧನಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**